# ಮೈಸೂರು ಮಹಾನಗರ ಪಾಲಿಕೆ

**ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ ಸಭೆಯ ನಡವಳಿ, ಮೈಸೂರು.**

ಸಭೆಯ ದಿನಾಂಕ : 17-02-2010.
ಸಭೆಯ ವೇಳೆ : ಬೆಳಿಗ್ಗೆ 9.00 ಕ್ಕೆ
ಅಧ್ಯಕ್ಷತೆ : ಮಾನ್ಯ ಜಿಲ್ಲಾಧಿಕಾರಿಗಳು ಹಾಗು ಜೆ.ಎನ್.ನರ್ಮ್ ವಿಶೇಷಾಧಿಕಾರಿಗಳು, ಮೈಸೂರು.

| ಕ್ರ. ಸಂ. | ಹಾಜರಿದ್ದವರು | ಕ್ರ ಸಂ. | ಹಾಜರಿದ್ದವರು |
|---|---|---|---|
| 1. | ಶ್ರೀ ಪುರುಷೋತ್ತಮ, ಮಾನ್ಯಮಹಾಪೌರರು, ಮೈನಪಾ | 20. | ಶ್ರೀ ಎಸ್. ತೇಜಶ್ರೀ, ಸಹಾಯಕ ಇಂಜಿನಿಯರ್, ಕೆಎಸ್‌ಸಿಬಿ |
| 2. | ಶ್ರೀಮತಿ ಶಾರದಮ್ಮಾ, ಉಪಮಹಾಪೌರರು, ಮೈನಪಾ | 21. | ಶ್ರೀ ಹೆಚ್. ಕಿಶೋರ್‌ಚಂದ್ರ, ಸಕಾಅ, ಮೂಡಾ |
| 3. | ಶ್ರೀ ಕೆ.ಎಸ್. ರಾಯ್ಕರ್, ಆಯುಕ್ತರು, ಮೈನಪಾ | 22. | ಶ್ರೀ ಎನ್. ಮಹದೇವಸ್ವಾಮಿ, ರೀಸರ್ಚ್ ಆಫಿಸರ್, ಕೆ.ಎಸ್.ಸಿ.ಬಿ |
| 4. | ಶ್ರೀ ಜಯಣ್ಣ, ಆಯುಕ್ತರು, ಮೂಡಾ | 23. | ಶ್ರೀಮತಿ ಶೋಭಾಭಟ್, ಮಾನವ ಸಂಪನ್ಮೂಲ ಅಧಿಕಾರಿ, ನರ್ಮ್ |
| 5. | ಶ್ರೀ ಬಿ.ಕೆ. ಸುರೇಶ್‌ಬಾಬು, ಅಇಂ, ನರ್ಮ್, ಮೈನಪಾ | 24. | ಶ್ರೀ ಶರತ್ ಹೆಚ್.ಎಸ್, ಐ.ಟಿ. ಆಫಿಸರ್, ಜೆಎನ್‌ನರ್ಮ್ |
| 6. | ಶ್ರೀ ಮಹೇಶ್, ಅಇಂ, ಮೈನಪಾ | 25. | ಶ್ರೀ ಚಿದಂಬರ್ ಬಿ.ಎಸ್, ಪಿ.ಹೆಚ್.ಇ, ನರ್ಮ್ |
| 7. | ಶ್ರೀ ಶಿವಕುಮಾರ್, ಅಇಂ, ಮೂಡಾ | 26. | ಶ್ರೀ ರಾಘವೇಂದ್ರ ಗುತ್ತಿಗೆ ವ್ಯವಸ್ಥಾಪಕರು, ಜಸ್ಕೋ |
| 8. | ಶ್ರೀ ಎಂ.ಎನ್. ಶ್ರೀನಿವಾಸ, ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ಸಂ. | 27. | ಶ್ರೀ ಲಕ್ಷ್ಮಣ್, ಸಂಚಾಲಕರು, ಎಸಿಐಸಿಎಂ |
| 9. | ಶ್ರೀ ಎಸ್.ಎ. ಚಂದ್ರಕಾಂತ್, ಕಾಅ, ನರ್ಮ್, ಮೈನಪಾ | 28. | ಶ್ರೀ ಆರ್.ಪಿ ಅಗರ್‌ವಾಲ್, ಜನರಲ್ ಮ್ಯಾನೇಜರ್, ಮೆ॥ ಪ್ರತ್ಯೂಷ ಅಸೋಸಿಯೇಷನ್ಸ್ |
| 10. | ಶ್ರೀ ಹೆಚ್.ಎಂ. ನಾಗರಾಜಮೂರ್ತಿ, ಕಾಅ, ಕೆ.ಎಸ್.ಆರ್.ಟಿ.ಸಿ | 29. | ಶ್ರೀ ಜಿ. ಶಿವಕುಮಾರ್, ಪ್ರಾಜೆಕ್ಟ್ ಮ್ಯಾನೇಜರ್, ಮೆ॥ ಪ್ರತ್ಯೂಷ ಅಸೋಸಿಯೇಷನ್ಸ್ |
| 11. | ಶ್ರೀ ಬಿ.ಎಲ್. ಭೈರಪ್ಪ, ನಗರಪಾಲಿಕೆ ಸದಸ್ಯರು, ಮೈನಪಾ | 30. | ಶ್ರೀ ಡಿ. ಮಲ್ಲಿಕಾರ್ಜುನ ಪ್ರಾಜೆಕ್ಟ್ ಡೈರೆಕ್ಟರ್, ಮೆ॥ ಎನ್.ಸಿ.ಸಿ.ಎಲ್ |
| 12. | ಶ್ರೀ ರಾಮಚಂದ್ರಯ್ಯ, ಸಕಾಅ, ಕೆ.ಯು.ಡಬ್ಲ್ಯೂ.ಎಸ್ & ಡಿಬಿ | 31. | ಶ್ರೀ ವಿ. ಶ್ರೀಧರ್, ಪ್ರಾಜೆಕ್ಟ್ ಮ್ಯಾನೇಜರ್, ಕಬಿನಿ ಜಿ.ಕೆ.ಸಿ ಪ್ರಾಜೆಕ್ಟ್ ಲಿಮಿಟೆಡ್ |
| 13. | ಶ್ರೀ ಎ.ಎನ್.ಪ್ರಸಾದ್, ಸಕಾಇಂ, ಮೈನಪಾ | 32. | ಶ್ರೀಮತಿ ಸವಿತಾ ನಾಗಭೂಷಣ, ಪ್ರಾಣಿ ದಯಾಸಂಘ, ಕುವೆಂಪುನಗರ |
| 14. | ಶ್ರೀ ಬಿ.ಎನ್. ರಾಮಕೃಷ್ಣ, ಸಕಾಇಂ, ಮೈನಪಾ | 33. | ಶ್ರೀ ಜಿ.ವಿ. ಕೃಷ್ಣ, ಬೂತ್ ಕಮಿಟಿ ಲೀಡರ್ |
| 15. | ಶ್ರೀ ರಾಮಕೃಷ್ಣ, ಸಕಾಇಂ, ಮೈನಪಾ | 34. | ಶ್ರೀ ಕುಮಾರ್, ಬೂತ್ ಕಮಿಟಿ ಲೀಡರ್ |
| 16. | ಶ್ರೀ ಎಂ.ವಿ. ಶ್ರೀಧರ್, ಸಕಾಇಂ, ನರ್ಮ್ | 35. | ಶ್ರೀ ಕಾರ್ಯಪ್ಪಾ, ಬೂತ್ ಕಮಿಟಿ ಲೀಡರ್ |
| 17. | ಶ್ರೀ ಎಂ. ಬಸವರಾಜು, ಸಕಾಇಂ, ನರ್ಮ್ | 36. | ಶ್ರೀ ರವಿ, ಮೈಸೂರು ಕನ್ನಡ ವೇದಿಕೆ ಸದಸ್ಯರು |
| 18. | ಶ್ರೀ ಬಿ.ಸಿ. ಕುಮಾರ್, ಸಕಾಇಂ, ಕ.ರಾ.ರ.ಸಾ.ಸಂ. | 37. | ಶ್ರೀ ಬಾಲಕೃಷ್ಣಾ, ಮೈಸೂರು ಕನ್ನಡ ವೇದಿಕೆ ಸದಸ್ಯರು |
| 19. | ಶ್ರೀ ಹೆಚ್. ಕಿಶೋರ್‌ಚಂದ್ರ, ಸಕಾಇಂ, ಮೂಡಾ | | |

ಹಿಂದಿನ ಸಭೆಯ ದಿನಾಂಕ : 20/01/09
ಮುಂದಿನ ಸಭೆಯ ದಿನಾಂಕ : 03/03/10
ಮುಂದಿನ ಸಭೆಯ ವೇಳೆ : ಬೆಳಿಗ್ಗೆ 9.00 ಗಂಟೆಗೆ
ಮುಂದಿನ ಸಭೆಯ ಸ್ಥಳ : ಎಂ.ಸಿ.ಸಿ ಸಭೆಯ ಸಭಾಂಗಣ, ಮೈಸೂರು
ತಯಾರಿಸಿದವರು : ಶ್ರೀ ಬಿ.ಕೆ. ಸುರೇಶ್‌ಬಾಬು, ಅಧೀಕ್ಷಕ ಇಂಜಿನಿಯರ್ (ನರ್ಮ್)
ಕಳುಹಿಸಿರುವುದು : ಶ್ರೀ ಬಿ.ಕೆ. ಸುರೇಶ್‌ಬಾಬು, ಅಧೀಕ್ಷಕ ಇಂಜಿನಿಯರ್ (ನರ್ಮ್)

ಅಧೀಕ್ಷಕ ಅಭಿಯಂತರು, ನರ್ಮ್, ಇವರು ಪೂಜ್ಯ ಮಹಾಪೌರರು, ಉಪಮಹಾಪೌರರು, ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು, ಆಯುಕ್ತರು ಮೈಸೂರು ಮಹಾನಗರ ಪಾಲಿಕೆ, ಆಯುಕ್ತರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮತ್ತು ನಗರಪಾಲಿಕೆ ಸದಸ್ಯರು, ಹಾಗೂ ಎಲ್ಲಾ ಅಧಿಕಾರಿಗಳು, ಗುತ್ತಿಗೆದಾರರು, ಮಾಧ್ಯಮ ಪ್ರತಿನಿಧಿಗಳು ಮತ್ತು ಸಾರ್ವಜನಿಕರನ್ನು ಸ್ವಾಗತಿಸಿದರು.

ನರ್ಮ್ ಯೋಜನೆಯಡಿ ಕೈಗೆತ್ತಿಕೊಂಡಿರುವ ಎಲ್ಲಾ ಕಾಮಗಾರಿಗಳ ಪ್ರಗತಿಯು. ನಿಗಧಿತ ಗುರಿಗೆ ಹಾಗೂ ಕಾರ್ಯಕ್ರಮಕ್ಕೆ ಅನುಗುಣವಾಗಿರುತ್ತದೆ. ಫೆಬ್ರವರಿ, 15 2010 ರ ಅಂತ್ಯಕ್ಕೆ ನರ್ಮ್ ಯೋಜನೆಯ ಒಟ್ಟು ಆರ್ಥಿಕ ಪ್ರಗತಿ, ರೂ. 285.05 ಕೋಟಿಗಳ ಗುರಿಗೆ ಎದುರಾಗಿ ರೂ. 291.70 ಕೋಟಿಗಳಾಗಿರುತ್ತದೆ. ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು, ಎಲ್ಲಾ ನರ್ಮ್ ತಂಡಕ್ಕೆ ಉತ್ತಮ ಪ್ರಗತಿ ಸಾಧನೆಗೆ ಪ್ರಶಂಸೆ ವ್ಯಕ್ತ ಪಡಿಸಿದರು ಹಾಗೂ ಮುಂದೆ ಇದೇ ರೀತಿ ಉತ್ತಮ ಪ್ರಗತಿ ಸಾಧಿಸಲು ಮತ್ತು ಕಾಮಗಾರಿಯನ್ನು ಗಡುವಿಗಿಂತ ಮುಂಚೆ ಪೂರ್ಣಗೊಳಿಸಲು ಸೂಚಿಸಿದರು.

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| 1 | ಮೈಸೂರು ನಗರದಲ್ಲಿ ನೀರು ಸರಬರಾಜು ನೆಟ್‌ವರ್ಕ್‌ನ ರೀಮಾಡಲ್ಲಿಂಗ್, ಸಿಸ್ಟಮ್ ಆಟೋಮೇಷನ್ ಮತ್ತು ಸಮಗ್ರ ನಿರ್ವಹಣಾ ವ್ಯವಸ್ಥೆ ಒದಗಿಸುವ ಯೋಜನೆ: ಯೋಜನಾ ಅಂದಾಜು ಮೊತ್ತ ರೂ.65.56 ಕೋಟಿಗಳು ಯೋಜನಾ ಮುಕ್ತಾಯ ದಿನಾಂಕ:ಜನವರಿ-2010 | ಜನವರಿ 15, 2010ರ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 71.43 ಕೋಟಿಗಳ ಎದುರಾಗಿ ರೂ. 71.55 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರ ಅನುಪಸ್ಥಿತಿಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. ಆರ್ಥಿಕ ಮತ್ತು ಭೌತಿಕ ಪ್ರಗತಿಯು ನಿಗಧಿತ ಗುರಿಗಿಂತ ಮುಂದಿರುತ್ತದೆ.<br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 54.17 ಕಿ.ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ. ಮತ್ತು 46.20 ಕಿ.ಮೀ ಉದ್ದದ ಪೈಪುಗಳನ್ನು ಅಳವಡಿಸಲಾಗಿರುತ್ತದೆಯೆಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಇವರು ತಿಳಿಸಿದರು. 54.17 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು 54.17 ಕಿ.ಮೀ ಉದ್ದಕ್ಕೆ ಹೊರಭಾಗದ ಲೈನಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 34.16 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನುನಡೆಸಲಾಗಿರುತ್ತದೆಯೆಂದು ತಿಳಿಸಲಾಯಿತು.<br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ 26.90 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, 21.23 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ 6.67 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು. | ಫೆಬ್ರವರಿ 15, 2010ರ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 74.34 ಕೋಟಿಗಳ ಎದುರಾಗಿ ರೂ. 74.60 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. ಆರ್ಥಿಕ ಮತ್ತು ಭೌತಿಕ ಪ್ರಗತಿಯು ನಿಗಧಿತ ಗುರಿಗಿಂತ ಮುಂದಿರುತ್ತದೆ.<br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 54.17 ಕಿ.ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ. ಮತ್ತು 51.01 ಕಿ.ಮೀ ಉದ್ದದ ಪೈಪುಗಳನ್ನು ಅಳವಡಿಸಲಾಗಿರುತ್ತದೆಯೆಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಇವರು ತಿಳಿಸಿದರು. 54.17 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು 54.17 ಕಿ.ಮೀ ಉದ್ದಕ್ಕೆ ಹೊರಭಾಗದ ಲೈನಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 36.63 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನುನಡೆಸಲಾಗಿರುತ್ತದೆಯೆಂದು ತಿಳಿಸಲಾಯಿತು.<br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ 26.90 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, 21.98 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ 11.13 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು.<br>ಎಲ್ಲಾ 25 ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳ ಪ್ರಗತಿಯಲ್ಲಿದೆ. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ಎಲ್ಲಾ 25 ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳ ಪ್ರಗತಿಯಲ್ಲಿದೆ. ಎಂದು ತಿಳಿಸಿದರು. ಇದರಲ್ಲಿ 15 ಓವರ್ ಹೆಡ್ ಟ್ಯಾಂಕ್‌ಗಳನ್ನು ಮಾರ್ಚ್ 2010 ರೊಳಗೆ, ಉಳಿದ 10 ಓವರ್ ಹೆಡ್ ಟ್ಯಾಂಕ್‌ಗಳನ್ನು ಜೂನ್ ಒಳಗೆ ಪೂರ್ಣಗೊಳಿಸುವುದಾಗಿ ತಿಳಿಸಿದರು.<br><br>ದಿನಾಂಕ: 15.02.2010ರೊಳಗೆ ದೇವನೂರು ಎಂ.ಬಿ.ಆರ್ ಅನ್ನು ಉಪಯೋಗಕ್ಕೆ ಸಿದ್ಧಪಡಿಸುವುದಾಗಿ ಮತ್ತು ಜರ್ಮನ್‌ಪ್ರೆಸ್ ಎಂ.ಬಿ.ಆರ್ ಅನ್ನು 20.02.2010ರೊಳಗೆ ಸಿದ್ದಪಡಿಸುವುದಾಗಿ ಮತ್ತು ಕುವೆಂಪುನಗರ ಎಂ.ಬಿ.ಆರ್ ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸುವುದಾಗಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು.<br><br>ಅಗೆದ ರಸ್ತೆಯ ಭಾಗದ ದುರಸ್ಥಿಯನ್ನು ಸರಿಯಾಗಿ ದಟ್ಟಣೆ ಮಾಡಿ ಡಾಂಬರೀಕರಣ ಮಾಡಿ ಪೂರ್ಣಗೊಳಿಸುವಂತೆ ಪಾಲಿಕೆ ಆಯುಕ್ತರು ಸೂಚಿಸಿದರು.<br><br>ಡಾಂಬರೀಕರಣ ಕಾಮಗಾರಿಯನ್ನು ಇನ್ನು 10 ದಿನದೊಳಗೆ ಪೂರ್ಣಗೊಳಿಸುವುದಾಗಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು. | ಒಟ್ಟು 5 ಮಾಸ್ಟರ್ ಝೋನ್‌ನಲ್ಲಿ 2 ಮಾಸ್ಟರ್ ಝೋನ್ ಮುಕ್ತಾಯಗೊಂಡಿದ್ದು, ಈ ಎರಡು ಮಾಸ್ಟರ್ ಝೋನ್‌ನ್ನು 24/7 ನೀರು ಸರಬರಾಜು ಅನುಷ್ಠಾನಗೊಳಿಸಲು ಜಸ್ಕೋದವರಿಗೆ ವಹಿಸಿಕೊಡಲಾಗಿದೆ. ಎಂದು ಕಾರ್ಯಪಾಲಕ ಇಂಜಿನಿಯರ್ ರವರು ತಿಳಿಸಿದರು.<br><br>ಕಾಮಗಾರಿಗಳನ್ನು ಅವಧಿಗಿಂತ ಮುಂಚೆ ಪೂರ್ಣಗೊಳಿಸಲು ಆಯುಕ್ತರು, ಮೈನಪಾ, ಇವರು ಕಾರ್ಯಪಾಲಕ ಅಭಿಯಂತರರು, ಕೆ.ಯು.ಡಬ್ಲ್ಯೂ.ಎಸ್ & ಡಿಬಿ ರವರಿಗೆ ಸೂಚಿಸಿದರು. ಇದಕ್ಕೆ ಉತ್ತರವಾಗಿ ಕಾರ್ಯಪಾಲಕ ಅಭಿಯಂತರರು, ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಇವರು ಪೈಪ್ ಲೈನ್ ಅಳವಡಿಸುವ ಕಾಮಗಾರಿಯನ್ನು ಮಾರ್ಚ್ 2010 ರೊಳಗೆ ಪೂರ್ಣಗೊಳಿಸುವುದಾಗಿಯೂ ಮತ್ತು ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯನ್ನು ಕ್ರಿಯಾಯೋಜನೆಯಂತೆ ಜೂನ್ 2010 ರಲ್ಲಿ ಮುಗಿಸುವುದಾಗಿ ತಿಳಿಸಿದರು. | |
| 2. | ಸ್ಕಾಡಾ ಯೋಜನೆ: ಅಂದಾಜು ಮೊತ್ತ: ರೂ. 5.24 ಕೋಟಿ<br>Agency: M/s. Mechatronics<br>ಅವಧಿ: 9 ತಿಂಗಳು<br>ಮುಕ್ತಾಯವಾಗಬೇಕಾದುದು: ಜುಲೈ-2009 | ಚರ್ಚೆಯಾಗಿರುವುದಿಲ್ಲ. | ಯಂತ್ರೋಪಕರಣಗಳು ಅಳವಡಿಸಲಾಗಿದ್ದು, ಪ್ರೋಗ್ರಾಂಮಿಂಗ್ ಪೂರ್ಣಗೊಂಡಿದ್ದು, ಪರೀಕ್ಷಾ ಹಂತದಲ್ಲಿದೆ ಎಂದು ಕಾರ್ಯಪಾಲಕ ಅಭಿಯಂತರರು, ಕೆ.ಯು.ಡಬ್ಲ್ಯೂ.ಎಸ್ & ಡಿಬಿ ರವರು ತಿಳಿಸಿದರು. | |
| 3. | 24x7 ನೀರು ಸರಬರಾಜು ಪಶ್ಚಿಮ ವಲಯ: ಅಂದಾಜುಮೊತ್ತ 56.07 ಕೋಟಿ ರೂ. ಸಿಎಸ್‌ಆರ್, ಕುವೆಂಪುನಗರ ಹೆಚ್.ಎಲ್.ಆರ್ ವಲಯದ ಭಾಗಶ: ವಲಯಗಳು ಮತ್ತು ಪೂರ್ವವಲಯ ಹೆಚ್.ಎಲ್.ಆರ್ ವಲಯದ | ಚರ್ಚೆಯಾಗಿರುವುದಿಲ್ಲ. | ಜಸ್ಕೋ ನಿರ್ವಹಣೆ ಬಗ್ಗೆ ಎಲ್ಲಾ ನಗರಪಾಲಿಕೆ ಸದಸ್ಯರು ಮತ್ತು ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದರು. ಜಸ್ಕೋ ಕಂಪನಿಯು ತಮ್ಮ ಒಪ್ಪಂದಂತೆ ಕಾಮಗಾರಿ ಅನುಷ್ಠಾನ ಮಾಡುವುದರಲ್ಲಿ ಸಂಪೂರ್ಣ ವಿಫಲರಾಗಿದ್ದಾರೆಂದು ಪೂಜ್ಯ ಮಹಾಪೌರರು, ತಿಳಿಸಿದರು. ಜಸ್ಕೋ ಕಂಪನಿಯವರು ಸಾರ್ವಜನಿಕರ ದೂರುಗಳಿಗೆ ಪ್ರತಿಕ್ರಿಯಿಸುತ್ತಿಲ್ಲವೆಂದು ಹಾಗೂ ವಲಯವಾರು ಉಪಾಯುಕ್ತರು ಮತ್ತು ನಗರ ಪಾಲಿಕೆ | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | ಭಾಗಶ: ಅಂದಾಜುಮೊತ್ತ 45.84 ಕೋಟಿ ರೂ. ಜರ್ಮನ್ ಪ್ರೆಸ್, ದೇವನೂರು, ಬಳ್ಳಾಲ್ ವೃತ್ತ ವಲಯಗಳು ಮತ್ತು ಹೆಚ್.ಎಲ್.ಆರ್ ವಲಯದ ಭಾಗಶ:<br><br>ಮುಕ್ತಾಯವಾಗಬೇಕಾದುದು: Jan-2013 | | ಸದಸ್ಯರೊಂದಿಗೆ ಸಭೆ ನಡೆಸುತ್ತಿಲ್ಲವೆಂದು ಎಲ್ಲರ ಸಾಮಾನ್ಯ ದೂರಾಗಿತ್ತು.<br><br>ಜಸ್ಕೋದವರಿಗೆ ಹಸ್ತಾಂತರಿಸುವ ಮೊದಲು 24 ಗಂಟೆಗಳ ಕಾಲ ನೀರು, ಸರಬರಾಜು ಇದ್ದು, ಈಗ ದಿನಕ್ಕೆ 1 ಗಂಟೆ ಕಾಲ ನೀರು ಪಡೆಯುವುದು ಕಷ್ಟವಾಗಿರುತ್ತದೆ ಎಂದು ಕುಮಾರ್ ನಾಗರೀಕ ಸಮಿತಿ ಮುಖಂಡರು ಮತ್ತು ಇತರೇ ನಾಗರೀಕರು ತಿಳಿಸಿದರು.<br><br>ಜಸ್ಕೋ ಕಂಪನಿಯವರು ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಸೋರುವಿಕೆಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವುದಿಲ್ಲವೆಂದು ಹಾಗೂ ಹಲವು ಸಾರಿ ತಿಳಿಸಿದಾಗ್ಯೂ ವಾಲ್ವ್‌ಗಳನ್ನು ಅಳವಡಿಸಲಾಗಿಲ್ಲವೆಂದು ಶ್ರೀ ಭೈರಪ್ಪ, ನಗರಪಾಲಿಕೆ ಸದಸ್ಯರು ತಿಳಿಸಿದರು.<br><br>ಜಸ್ಕೋ ಅಧಿಕಾರಿಗಳಿಗೆ ಅವರ ನಿರ್ಲಕ್ಷತೆ ಹಾಗೂ ತಪ್ಪುಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಾಧಿಕಾರಿಗಳು ಎಚ್ಚರಿಕೆ ನೀಡಿದರು, ಹಾಗೂ ಇದುವರೆವಿಗೂ ನಡೆಸಿರುವ ಅಧ್ಯಯನದ ಬಗ್ಗೆ ಹಾಗೂ ಸಾರ್ವಜನಿಕರೊಂದಿಗೆ ಸಭೆಗಳನ್ನು ನಡೆಸಿರುವ ಬಗ್ಗೆ ವಿವರಗಳನ್ನು ನೀಡಲು ಸೂಚಿಸಿದರು.<br><br>ಜಸ್ಕೋ ಕಂಪನಿಯವರು ಮೈಸೂರು ನಗರಕ್ಕೆ ನೀರು ಸರಬರಾಜು ಕಾಮಗಾರಿ ಬಗ್ಗೆ ತಾವೇ ಪತ್ರಿಕಾ ವರದಿಯನ್ನು ನೀಡುತ್ತಿರುವರೆಂದು ಶ್ರೀ ಲಕ್ಷ್ಮಣ ಸಂಚಾಲಕರು ಎಸಿಐಸಿಎಂ ರವರು ತಿಳಿಸಿದರು. ಇನ್ನು ಮುಂದೆ ನೀರು ಸರಬರಾಜು ಕಾಮಗಾರಿಗೆ ಸಂಬಂಧಿಸಿದಂತೆ ಯಾವುದೇ ಪತ್ರಿಕಾ ವರದಿಯನ್ನು ನೀಡುವ ಮುನ್ನ ಆಯುಕ್ತರು ಮೈನಪಾ ರವರಿಂದ ಅನುಮೋದನೆ ಪಡೆಯಬೇಕೆಂದು ಜಸ್ಕೋದವರಿಗೆ ಸೂಚಿಸಲಾಯಿತು.<br><br>ಜಸ್ಕೋಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸುವ ಸಲುವಾಗಿ ದಿನಾಂಕ 23.02.2010 ಮಧ್ಯಾಹ್ನ 12.00 ಗಂಟೆಗೆ ಒಂದು ಪ್ರತ್ಯೇಕ ಸಭೆಯನ್ನು ಪೂಜ್ಯ ಮಹಾಪೌರರು ಹಾಗೂ ಎಲ್ಲಾ ಪಾಲಿಕೆ ಸದಸ್ಯರೊಂದಿಗೆ ನಡೆಸಲು ನಿರ್ಧರಿಸಲಾಯಿತು. ಸದರಿ ಸಭೆಯ ದಿನಾಂಕವನ್ನು ವ್ಯವಸ್ಥಾಪಕ ನಿರ್ದೇಶಕರು ಕೆ.ಯು.ಡಬ್ಲ್ಯೂ.ಎಸ್ & ಡಿಬಿ, ಚೆಸ್ಕಾಂ ಅಧಿಕಾರಿಗಳು ವಿವಿಡಬ್ಲ್ಯೂ ಡಬ್ಲ್ಯೂ ಇಂಜಿನಿಯರ್, ಎಲ್ಲ ವಲಯ ಉಪಾಯುಕ್ತರು ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಸಭೆಗೆ ಹಾಜರಾಗುವಂತೆ ತಿಳಿಸಲು ಸೂಚಿಸಲಾಯಿತು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | | ಜಸ್ಕೋ ಪ್ರತಿನಿಧಿಗಳಿಗೆ ಅದರ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಪ್ಪದೆ ಹಾಜರಾಗುವಂತೆ ತಿಳಿಸಲು ಸೂಚಿಸಲಾಯಿತು. ಈ ಬಗ್ಗೆ ಅಧೀಕ್ಷಕ ಇಂಜಿನಿಯರ್, ಜೆಎನ್‌ನರ್ಮ್ ಇವರು ಸೂಕ್ತ ಕ್ರಮ ತೆಗೆದುಕೊಳ್ಳುವುದು. | |
| 4. | ಮೈಸೂರು ನಗರಕ್ಕೆ ಸಗಟು ನೀರು ಸರಬರಾಜನ್ನು ಕಬಿನಿ ನದಿಯಿಂದ ತರುವ ಯೋಜನೆ:<br>**ಯೋಜನೆಯ ಅಂದಾಜು ರೂ.** 108.81 ಕೋಟಿ<br>ಮುಕ್ತಾಯವಾಗಬೇಕಾದುದು<br>Jan-2012 | ಕಾಮಗಾರಿಗಳು ಪ್ರಾರಂಭಗೊಂಡಿದ್ದು, 15, 2010 ಜನವರಿ ತಿಂಗಳ ಅಂತ್ಯದವರೆಗೆ ನಿಗಧಿಪಡಿಸಿದ್ದ ಗುರಿಯಾದ ರೂ. 2.71 ಕೋಟಿಗಳ ಎದುರಾಗಿ ರೂ. 3.00 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಇವರು ತಿಳಿಸಿದರು.<br>ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ, ಉಪ ವಿಭಾಗಾಧಿಕಾರಿಗಳು, ಮೈಸೂರುರವರು ಅವಾರ್ಡ್ ನೋಟಿಸ್ ಜಾರಿ ಮಾಡಿದ್ದು, ಆದರೆ ಭೂ ಮಾಲೀಕರು ಈ ಅವಾರ್ಡನ್ನು ಒಪ್ಪಿಕೊಂಡಿರುವುದಿಲ್ಲವೆಂದು ತಿಳಿಸಿದರು. ಈ ಸಂಬಂಧ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ಸನ್ಮಾನ್ಯ ಶಾಸಕರು, ಪೂಜ್ಯ ಮಹಾಪೌರರು ಮತ್ತು ಸ್ಥಳೀಯ ಮಹಾನಗರ ಪಾಲಿಕೆ ಸದಸ್ಯರುಗಳನ್ನು ಒಳಗೊಂಡಂತೆ ಭೂ ಮಾಲೀಕರ ಜೊತೆ ಮತ್ತೊಂದು ಸಭೆಯನ್ನು ಏರ್ಪಡಿಸಲು ನಿರ್ಧರಿಸಲಾಯಿತು. ಈ ಸಂಬಂಧ ತುರ್ತಾಗಿ ನಿರ್ಧಾರವನ್ನು ತೆಗೆದುಕೊಳ್ಳುವುದಾಗಿ ಪಾಲಿಕೆ ಆಯುಕ್ತರು, ಮೈನಪಾ ಇವರು ತಿಳಿಸಿದರು. ಈ ಕೂಡಲೇ ಒಂದು ಸಭೆಯನ್ನು ಕರೆಯಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರಿಗೆ ತಿಳಿಸಲಾಯಿತು.<br>ಈ ಯೋಜನೆಯಡಿಯಲ್ಲಿ ಬರುವ ಭೂ ಮಾಲೀಕರುಗಳಿಗೆ ಭೂ ಪರಿಹಾರವನ್ನು ಇತ್ಯರ್ಥಗೊಳಿಸುವ ಸಂಬಂಧ ಮಾನ್ಯ ಮುಖ್ಯಮಂತ್ರಿಗಳ ಬಳಿ ಒಂದು ನಿಯೋಗವನ್ನು ತೆಗೆದುಕೊಂಡು ಹೋಗುವಂತೆ ಪೂಜ್ಯ ಮಹಾಪೌರರಿಗೆ ಶ್ರೀ ಲಕ್ಷ್ಮಣ್, ಸಂಚಾಲಕರು, ಇವರು ಸಲಹೆ ನೀಡಿದರು. | ಕಾಮಗಾರಿಗಳು ಪ್ರಾರಂಭಗೊಂಡಿದ್ದು, 15 ಫೆಬ್ರವರಿ 2010 ತಿಂಗಳ ಅಂತ್ಯದವರೆಗೆ ನಿಗಧಿಪಡಿಸಿದ್ದ ಗುರಿಯಾದ ರೂ. 6.02 ಕೋಟಿಗಳ ಎದುರಾಗಿ ರೂ. 11.75 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್ ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಇವರು ತಿಳಿಸಿದರು.<br>ಈ ಯೋಜನೆ ವ್ಯಾಪ್ತಿಗೆ ಒಳಪಡುವ ಜಮೀನಿನ ಭೂಮಾಲಿಕರು ಅವರ ಭೂಮಿಯನ್ನು ನೀಡಲು ಒಪ್ಪಿದ್ದು ಮತ್ತು ಕನ್ಸೆಂಟ್ ಆವಾರ್ಡ್ ಪಾಸ್ ಮಾಡಿದಲ್ಲಿ ಅದರಂತೆ ಪರಿಹಾರವನ್ನು ಸ್ವೀಕರಿಸಲು ಒಪ್ಪಿರುತ್ತಾರೆಂದು ಮಾನ್ಯ ಮಹಾಪೌರರು ತಿಳಿಸಿದರು. ಭೂ ಪರಿಹಾರವನ್ನು 2 ಕಂತುಗಳಲ್ಲಿ ಅಚಿದರೆ ಪ್ರಸಕ್ತ ವರ್ಷದಲ್ಲಿ ಹಾಗೂ ಮುಂದಿನ ವರ್ಷದಲ್ಲಿ ನೀಡಲು ನಿರ್ಧರಿಸಲಾಯಿತು.<br>ದೀರ್ಘ ಚರ್ಚೆಯ ನಂತರ ಯೋಜನೆಯ ಶಂಕು ಸ್ಥಾಪನೆಯನ್ನು ನೆರವೇರಿಸಲು ಮಾನ್ಯ ಮುಖ್ಯ ಮಂತ್ರಿಗಳನ್ನು ಆಹ್ವಾನಿಸಲು ನಿರ್ಧರಿಸಲಾಯಿತು.<br>ಈ ಮಧ್ಯೆ ಭೂ ಪರಿಹಾರದ ವಿಷಯವು ಇತ್ಯರ್ಥವಾಗಿರುವುದರಿಂದ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಇವರಿಗೆ ಸೂಚಿಸಲಾಯಿತು. ದಿನಾಂಕ 19.02.2010 ಶುಕ್ರವಾರದಂದು ಕಾಮಗಾರಿಯನ್ನು ಪ್ರಾರಂಭಿಸಲಾಗುವುದೆಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಇವರು ಭರವಸೆ ನೀಡಿದರು. | |
| 5 | ಮೈಸೂರು ನಗರದ ಸಾರಿಗೆ ವ್ಯವಸ್ಥೆಗೆ ಮೂಲಭೂತ ಸೌಕರ್ಯ ಒದಗಿಸುವುದು. | 2010, 15 ಜನವರಿ ತಿಂಗಳ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 70.16 ಕೋಟಿಗಳ ಎದುರಾಗಿ ರೂ. 70.25 ಕೋಟಿಗಳ ಆರ್ಥಿಕ ಪ್ರಗತಿಯನ್ನು | 15 ಫೆಬ್ರವರಿ 2010, ತಿಂಗಳ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 73.69 ಕೋಟಿಗಳ ಎದುರಾಗಿ ರೂ. 73.75 ಕೋಟಿಗಳ ಆರ್ಥಿಕ ಪ್ರಗತಿಯನ್ನು | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | ಯೋಜನಾ ವೆಚ್ಚ: ರೂ 85.25 ಕೋಟಿಗಳು. ಗುತ್ತಿಗೆ ಪ್ರೀಮಿಯಂ: 17.50% ಮೇಲ್ಪಟ್ಟು (ರೂ. 108.59 ಕೋಟಿ) ಗುತ್ತಿಗೆ ಅವಧಿ: ಮಾನ್ಸೂನ್ ಬಿಟ್ಟು 18 ತಿಂಗಳು (3 ತಿಂಗಳು ಮಾನ್ಸೂನ್ ಕಾಲ) ಮುಕ್ತಾಯವಾಗಬೇಕಾದುದು Jan-2010 | ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಅಭಿಯಂತರು, ಕೆ.ಎಸ್.ಆರ್.ಟಿ.ಸಿ ಇವರು ತಿಳಿಸಿದರು. ಪ್ರಗತಿಯು ನಿಗಧಿತ ಗುರಿಯಂತೆ ಇರುತ್ತದೆ.<br><br>ಶ್ರೀ ಲಕ್ಷ್ಮಣ್, ಸಂಚಾಲಕರು ಇವರು ತಾವು ಸಂಗ್ರಹಿಸಿರುವ ಮಾಹಿತಿ ಪ್ರಕಾರ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ವಾಣಿಜ್ಯ ಉಪಯೋಗಕ್ಕಾಗಿ ಮಳಿಗೆಗಳನ್ನು ಹಂಚುವ ಸಂಬಂಧ ಗ್ಲೋಬಲ್ ಟೆಂಡರ್‌ನ್ನು ಕೆ.ಎಸ್.ಆರ್.ಟಿ.ಸಿಯಿಂದ ಇತ್ಯರ್ಥಗೊಳಿಸುತ್ತಿರುವ ಹಂತದಲ್ಲಿರುವುದಾಗಿ ತಿಳಿಸಿದರು. ಶ್ರೀ ಲಕ್ಷ್ಮಣ್, ಸಂಚಾಲಕರು ಇವರು ಆದಾಯ ಉತ್ಪತ್ತಿ ಮಾದರಿಯನ್ನು ಅಂತಿಮಗೊಳಿಸುವಂತೆ ಸಲಹೆ ನೀಡಿದರು.<br><br>ನಿರ್ದೇಶಕರು, ಕೆ.ಎಸ್.ಆರ್.ಟಿ.ಸಿ ಇವರು ಮೈಸೂರಿಗೆ ಭೇಟಿ ನೀಡುತ್ತಿರುವುದಾಗಿ ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು. ಸದರಿ ವಿಷಯವನ್ನು ಚರ್ಚಿಸುವ ಸಂಬಂಧ ನಿರ್ದೇಶಕರೊಂದಿಗೆ ಒಂದು ಸಭೆಯನ್ನು ಏರ್ಪಡಿಸಲು ಸೂಚಿಸಲಾಯಿತು. (ಕ್ರಮ ಕಾರ್ಯಪಾಲಕ ಇಂಜಿನಿಯರ್, ಕೆ.ಎಸ್.ಆರ್.ಟಿ.ಸಿ).<br>ಮುಂದಿನ ಎಸ್.ಎಲ್.ಎನ್.ಎ ಸಭೆಯಲ್ಲಿ ಸದರಿ ವಿಷಯವನ್ನು ಸಭೆಯ ಅಜೆಂಡಾವನ್ನಾಗಿ ಸೇರಿಸುವುದಾಗಿ ಪಾಲಿಕೆ ಆಯುಕ್ತರು ತಿಳಿಸಿದರು.<br><br>ಈಗಾಗ್ಗೆ ತಿಳಿಸಿದಾಗ್ಯೂ ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳು ಪರಿವೀಕ್ಷಣೆಗೆ ವ್ಯವಸ್ಥೆ ಮಾಡದಿಲ್ಲದಿರುವ ಬಗ್ಗೆ ಪೂಜ್ಯ ಮಹಾಪೌರರು ಅಸಮಾಧಾನ ವ್ಯಕ್ತಪಡಿಸಿದರು.<br><br>ಪೂಜ್ಯ ಮಹಾಪೌರರ ಮತ್ತು ಇತರೆ ಸದಸ್ಯರುಗಳಿಂದ ಪರಿವೀಕ್ಷಣೆಗೆ ಕೂಡಲೇ ವ್ಯವಸ್ಥೆ ಮಾಡುವಂತೆ ವಿಭಾಗೀಯ ನಿಯಂತ್ರಣಾಧಿಕಾರಿಗಳು/ ಕಾರ್ಯಪಾಲಕ ಇಂಜಿನಿಯರ್, ಕೆ.ಎಸ್.ಆರ್.ಟಿ.ಸಿ ಇವರಿಗೆ ಸೂಚಿಸಲಾಯಿತು. | ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಅಭಿಯಂತರು, ಕೆ.ಎಸ್.ಆರ್.ಟಿ.ಸಿ ಇವರು ತಿಳಿಸಿದರು. ಪ್ರಗತಿಯು ನಿಗಧಿತ ಗುರಿಯಂತೆ ಇರುತ್ತದೆ.<br>ಚಾಮುಂಡಿ ಬೆಟ್ಟದಲ್ಲಿನ ಅರಣ್ಯ ಭೂಮಿಯನ್ನು ಪಡೆಯಲು ಕ.ರಾ.ರ.ಸಾ.ಸಂ. ಅಧಿಕಾರಿಗಳು ನಿಷ್ಠೆಯಿಂದ ಪ್ರಯತ್ನ ಮಾಡದಿರುವುದನ್ನು ಗಮನಿಸಲಾಯಿತು. ಸದರಿ ವಿಷಯದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಖುದ್ದಾಗಿ ಸಂಪರ್ಕಿಸಿ ಒತ್ತಡ ತರಲು ವಿಭಾಗೀಯ ನಿಯಂತ್ರಣಾಧಿಕಾರಿಗಳು ಕ.ರಾ.ರ.ಸಾ.ಸಂ. ಇವರಿಗೆ ಸೂಚಿಸಲಾಯಿತು.<br>ಪದೇ ಪದೇ ತಿಳಿಸಿದರೂ ಕ.ರಾ.ರ.ಸಾ.ಸಂ. ಅಧಿಕಾರಿಗಳು ಪರಿವೀಕ್ಷಣೆಗೆ ವ್ಯವಸ್ಥೆ ಮಾಡದಿರುವುದರ ಬಗ್ಗೆ ಪೂಜ್ಯ ಮಹಾಪೌರರು ಅಸಮಾಧಾನ ವ್ಯಕ್ತ ಪಡಿಸಿದರು. ಪೂಜ್ಯ ಮಹಾಪೌರರು ಹಾಗೂ ಇತರೇ ಸದಸ್ಯರೊಗಳೊಂದಿಗೆ ಪರಿವೀಕ್ಷಣೆಯನ್ನು ತುರ್ತಾಗಿ ವ್ಯವಸ್ಥೆ ಮಾಡುವಂತೆ ವಿಭಾಗೀಯ ನಿಯಂತ್ರಣಾಧಿಕಾರಿಗಳು/ಕಾರ್ಯಪಾಲಕ ಇಂಜಿನಿಯರ್, ಕ.ರಾ.ರ.ಸಾ.ಸಂ. ಇವರಿಗೆ ತಿಳಿಸಲಾಯಿತು.<br>ಕ.ರಾ.ರ.ಸಾ.ಸಂ. ಅಧಿಕಾರಿಗಳು ಅಗೌರವ ತೋರಿಸುತ್ತಿದ್ದಾರೆಂದು ಪೂಜ್ಯ ಮಾಹಾಪೌರರು ತಿಳಿಸಿದರು. ಈ ಬಗ್ಗೆ ಎಚ್ಚರಿಕೆಯಿಂದ ಇರುವಂತೆ ಹಾಗೂ ಈ ರೀತಿ ಮರುಕಳಿಸಲು ಆಸ್ಪದ ಕೊಡದಂತೆ ಎಚ್ಚರಿಕೆ ವಹಿಸಲು ಕ.ರಾ.ರ.ಸಾ.ಸಂ. ಅಧಿಕಾರಿಗಳಿಗೆ ಸೂಚಿಸಲಾಯಿತು.<br>ನಗರದಲ್ಲಿ ವಾಹನ ದಟ್ಟಣೆಯನ್ನು ಕಡಿಮೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ಸಾರಿಗೆ ಸಮನ್ವಯ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದೆಯೆಂದು ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು ಸ್ಪಷ್ಟನೆ ನೀಡಿದರು. ಅದಕ್ಕಾಗಿ ಗ್ರಾಮಾಂತರ ಬಸ್ ನಿಲ್ದಾಣವನ್ನು ನಗರದ ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಅಂದರೆ ಬನ್ನಿಮಂಟಪ, ನಂಜನಗೂಡು ರಸ್ತೆ, ಸಾತಗಳ್ಳಿ ಮತ್ತು ವಿಜಯನಗರ ಇಲ್ಲಿಗೆ ಸ್ಥಳಾಂತರಿಸುವುದು ಅವಶ್ಯವಿರುತ್ತದೆ. ಒಮ್ಮೆ ಇದನ್ನು ಸ್ಥಳಾಂತರಿಸಿದ ನಂತರ ಹಾಲಿ ಇರುವ ಗ್ರಾಮಾಂತರ ಬಸ್ ನಿಲ್ದಾಣವನ್ನು ನಗರ ಸಾರಿಗೆ ಬಸ್ ನಿಲ್ದಾಣವಾಗಿ ಪರಿವರ್ತಿಸಲು ಸಾಧ್ಯವಾಗುತ್ತದೆ. ಈ ಪೂರ್ಣ ಪ್ರಕ್ರಿಯೆಗೆ ಸಾಕಷ್ಟು ಕಾಲವಕಾಶ ಅವಶ್ಯವಿರುತ್ತದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ನರ್ಮ್ | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | | ವಿಶೇಷಾಧಿಕಾರಿಗಳು ತಿಳಿಸಿದರು.<br>ಬಸ್ ನಿಲ್ದಾಣದಲ್ಲಿ ಮಳಿಗೆಗಳನ್ನು ಬಾಡಿಗೆ ಆಧಾರದ ಮೇಲೆ ಕ.ರಾ.ರ.ಸಾ.ಸಂ. ಅಧಿಕಾರಿಗಳು ನೀಡುತ್ತಿರುವ ವಿಷಯದ ಬಗ್ಗೆ ಶ್ರೀ ಲಕ್ಷ್ಮಣ, ಸಂಚಾಲಕರು, ಎಸಿಐಸಿಎಂ ಇವರು ಪ್ರಸ್ತಾಪಿಸಿದರು. ಇದಕ್ಕೆ ಉತ್ತರವಾಗಿ ಆಯುಕ್ತರು, ಮೈನಪಾ ಇವರು ಸದರಿ ವಿಷಯವನ್ನು ಸೂಕ್ತ ನಿರ್ಧಾರಕ್ಕಾಗಿ ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಮುಂದೆ ಮಂಡಿಸಲಾಗುವುದೆಂದು ತಿಳಿಸಿದರು. | |
| 6. | ಮೈಸೂರು ನಗರದ 20 ಆಯ್ದ ಕೊಳಚೆ ಪ್ರದೇಶಗಳ ಪುನರ್ ವಸತಿ ಯೋಜನೆ: ಅಂದಾಜು ವೆಚ್ಚ: **ರೂ. 45.27 ಕೋಟಿಗಳು.**<br>ಹಂತ–1<br>ಮುಕ್ತಾಯವಾಗಬೇಕಾದುದು Jan-2012 | 2010, 15 ಜನವರಿ ತಿಂಗಳ ಅಂತ್ಯಕ್ಕೆ ನಿಗದಿಪಡಿಸಿದ್ದ ಗುರಿಯಾದ ರೂ. 35.74 ಕೋಟಿಗಳ ಎದುರಾಗಿ ರೂ. 35.76 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಎಸ್.ಸಿ.ಬಿ ಇವರು ತಿಳಿಸಿದರು.<br><br>ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ದಿನಾಂಕ: 11.01.2010 ರಂದು ಫಲಾನುಭವಿಗಳ ಪಟ್ಟಿಯನ್ನು ಇತ್ಯರ್ಥಗೊಳಿಸದಿರುವುದಿಲ್ಲವೆಂದು ಮತ್ತು ಸದರಿ ಪ್ರಕ್ರಿಯೆಯನ್ನು ಮುಂದೂಡಲಾಗಿರುತ್ತದೆ ಎಂದು ಶ್ರೀ ಭೈರಪ್ಪ, ಪಾಲಿಕೆ ಸದಸ್ಯರು ಇವರು ತಿಳಿಸಿದರು. ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಹಾಗೂ ಪಾಲಿಕೆಯ ಕಛೇರಿ, ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ ಮತ್ತು ಕೊಳಚೆ ನಿರ್ಮೂಲನಾ ಮಂಡಳಿಯ ಕಛೇರಿಯಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲು ಸಲಹೆ ನೀಡಿದರು.<br><br>ಇದಕ್ಕೆ ಉತ್ತರವಾಗಿ, ಫಲಾನುಭವಿಗಳ ಹಂಚಿಕೆ ದಿನಾಂಕವನ್ನು ಕೆಲವು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿರುತ್ತದೆಯೆಂದು ಪಾಲಿಕೆ ಆಯುಕ್ತರು ತಿಳಿಸಿದರು. ಫಲಾನುಭವಿಗಳ ಪಟ್ಟಿಯನ್ನು ಸ್ಥಳೀಯ ಪತ್ರಿಕೆಗಳಲ್ಲಿ ಹಾಗೂ ಪಾಲಿಕೆ ಮತ್ತು ಕೆ.ಎಸ್.ಸಿ.ಬಿ ಕಛೇರಿಯಲ್ಲಿ ಪ್ರಕಟಪಡಿಸಿ, ಆಕ್ಷೇಪಣೆಗಳು ಯಾವುದಾದರು ಇದ್ದರೆ ಅದನ್ನು ಸಲ್ಲಿಸಲು ಕರೆಯುವುದಾಗಿ ಭರವಸೆ ನೀಡಿದರು.<br>1088 ಮನೆಗಳಿಗೆ ಫಲಾನುಭವಿಗಳ ಪಟ್ಟಿಯನ್ನು ದಿನಾಂಕ: 21.01.2010ರಂದು ಪ್ರಕಟಿಸುವುದಾಗಿ ಕಾರ್ಯಪಾಲಕ ಇಂಜಿನಿಯರ್, ಕೆ.ಎಸ್.ಸಿ.ಬಿ ಇವರು | ಕಾರ್ಯಪಾಲಕ ಇಂಜಿನಿಯರ್ ಕೆಎಸ್‌ಸಿಬಿ ಇವರು ಸಭೆಗೆ ಹಾಜರಾಗಿರುವುದಿಲ್ಲ. ಕಾರ್ಯಪಾಲಕ ಇಂಜಿನಿಯರ್‌ರವರು ಬೆಂಗಳೂರಿನಲ್ಲಿ ಸರ್ಕಾರದ ಮಟ್ಟದ ಸಭೆಯಲ್ಲಿ ಭಾಗವಹಿಸಲು ಹೋಗಿರುತ್ತಾರೆಂದು ತಿಳಿಸಲಾಯಿತು. ಕೊಳಚೆ ನಿರ್ಮೂಲನಾ ಮಂಡಳಿ ಅಧಿಕಾರಿಗಳಿಂದ ಸೂಕ್ತ ಸಹಕಾರ ದೊರಕುತ್ತಿಲ್ಲದಿರುವ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಲು ಸೂಚಿಸಲಾಯಿತು. ಸಭೆಗೆ ಗೈರು ಹಾಜರಾಗಿರುವುದಕ್ಕೆ ವಿವರಣೆ ಕೋರಿ ಕಾರ್ಯಪಾಲಕ ಇಂಜಿನಿಯರ್ ಕೆಎಸ್‌ಸಿಬಿ ರವರಿಗೆ ಷೋಕಾಸ್ ನೋಟಿಸ್ ಜಾರಿ ಮಾಡಲು ಸೂಚಿಸಲಾಯಿತು.<br>2788 ಮನೆಗಳ ಹಂಚಿಕೆ ಸಂಬಂಧ ಫಲಾನುಭವಿಗಳ ಪಟ್ಟಿಯನ್ನು ಪ್ರಕಟಿಸಿರುವುದಾಗಿ ತಿಳಿಸಲಾಯಿತು. ಆದರೆ ಸದರಿ ಪಟ್ಟಿಯನ್ನು ದಿನಪತ್ರಿಕೆಗಳಲ್ಲಿ ಮತ್ತು ವಲಯ ಕಛೇರಿಗಳಲ್ಲಿ ಪ್ರಕಟಿಸಿರುವುದಿಲ್ಲವೆಂದು ಶ್ರೀ ಭೈರಪ್ಪ ನಗರಪಾಲಿಕೆ ಸದಸ್ಯರು ಇವರು ತಿಳಿಸಿದರು. ಫಲಾನುಭವಿಗಳ ಪಟ್ಟಿಯನ್ನು 2 ಸ್ಥಳೀಯ ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಮತ್ತು ಸಾರ್ವಜನಿಕರು ತಕರಾರು ಸಲ್ಲಿಸಲು 7 ದಿನಗಳ ಅವಧಿಯನ್ನು ನಿಗದಿಪಡಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಾಧಿಕಾರಿಗಳು ಸೂಚಿಸಿದರು. ಫಲಾನುಭವಿಗಳ ಪಟ್ಟಿಯನ್ನು ದಿನಪತ್ರಿಗಳಲ್ಲಿ ಪ್ರಕಟಿಸಲು ಪಾಲಿಕೆ ವತಿಯಿಂದ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಯಿತು. ದೂರುಗಳನ್ನು ಸ್ವೀಕರಿಸಲು ದೂರು ಪೆಟ್ಟಿಗೆಯನ್ನು ಎಲ್ಲಾ ವಲಯ ಕಛೇರಿ ಹಾಗೂ ಪಾಲಿಕೆ ಕಛೇರಿಯಲ್ಲಿ ಇಡಲು ಸೂಚಿಸಲಾಯಿತು.<br>ಧರ್ಮಸಿಂಗ್ ಕಾಲೋನಿಯಲ್ಲಿ ಕಾಮಗಾರಿಗಳು ಸ್ಥಗಿತಗೊಂಡಿರುವುದಾಗಿ ಶ್ರೀ ನಾರಾಯಣ, ಮಾಜಿ ಮಹಾಪೌರರು ತಿಳಿಸಿದರು. ಇದನ್ನು ಪರಿಶೀಲಿಸಿ ವರದಿ ಸಲ್ಲಿಸಲು ಅಧೀಕ್ಷಕ ಇಂಜಿನಿಯರ್ | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ತಿಳಿಸಿದರು. ಈ ಬಗ್ಗೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಸಾರ್ವಜನಿಕರು ಅದನ್ನು ಸಲ್ಲಿಸಲು ಅನುಕೂಲವಾಗುವಂತೆ ಪೂರ್ಣ ಪಟ್ಟಿಯನ್ನು ಎಲ್ಲಾ ವಿವರಗಳೊಂದಿಗೆ ದಿನ ಪತ್ರಿಕೆಯಲ್ಲಿ ಪ್ರಕಟಿಸುವಂತೆ ಕಾರ್ಯಪಾಲಕ ಇಂಜಿನಿಯರ್, ಕೆ.ಎಸ್.ಸಿ.ಬಿ ಇವರಿಗೆ ನಿರ್ದೇಶಿಸಲಾಯಿತು.<br>150 ಮನೆಗಳ ನಿರ್ಮಾಣಕ್ಕೆ ಅವಶ್ಯವಿರುವ ಭೂಮಿಯನ್ನು ರೈಲ್ವೆ ಅಧಿಕಾರಿಗಳಿಂದ ಕೋರಿದ್ದು, ಸದರಿ ವಿಷಯವು ಇತ್ಯರ್ಥವಾಗಲು ಬಹಳ ಸಮಯ ಬೇಕಾಗುವ ಸಂಭವವಿರುವುದರಿಂದ, ಪರ್ಯಾಯವಾಗಿ ಸೂಕ್ತ ಬದಲಿ ಜಾಗವನ್ನು ಗುರುತಿಸುವಂತೆ ಕಾರ್ಯಪಾಲಕ ಇಂಜಿನಿಯರ್, ಕೆ.ಎಸ್.ಸಿ.ಬಿ ಇವರಿಗೆ ಸೂಚಿಸಲಾಯಿತು.<br>ಮೈಸೂರು ನಗರದಲ್ಲಿ ಎಲ್ಲಾ ಸ್ಲಂಗಳನ್ನು ನಿರ್ಮೂಲನಾ ಮಾಡಲು ಮತ್ತು ಯಾವುದೇ ಹೊಸ ಸ್ಲಂಗಳು ಬರಲು ಅವಕಾಶ ನೀಡಬಾರದಾಗಿ ಶ್ರೀ ಲಿಂಗಪ್ಪ, ಪಾಲಿಕೆ ಸದಸ್ಯರು ಇವರು ಸಲಹೆ ನೀಡಿದರು.<br>ಇದಕ್ಕೆ ಉತ್ತರವಾಗಿ, ಮೈಸೂರು ನಗರವನ್ನು ಸ್ಲಂ ರಹಿತ ನಗರವನ್ನಾಗಿ ಮಾಡುವುದು ಸರ್ಕಾರದ ಉದ್ದೇಶವಾಗಿದ್ದು, ಇದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯವಿರುವುದಾಗಿ ಪಾಲಿಕೆ ಆಯುಕ್ತರು ತಿಳಿಸಿದರು ಮತ್ತು ಈ ಕಾರ್ಯದಲ್ಲಿ ಭಾಗಿಯಾಗಿ ಮೈಸೂರು ನಗರವನ್ನು ಸ್ಲಂ ರಹಿತ ನಗರವನ್ನಾಗಿ ಮಾಡಲು ಜವಾಬ್ದಾರಿ ತೆಗೆದುಕೊಳ್ಳಬೇಕೆಂದು ಎಲ್ಲಾ ಪಾಲಿಕೆ ಸದಸ್ಯರನ್ನು ಕೋರಿದರು. | ಜೆಎನ್‌ನರ್ಮ್ ಇವರಿಗೆ ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಾಧಿಕಾರಿಗಳು ಸೂಚಿಸಿದರು.<br><br>ಸದಸ್ಯರು ಪ್ರಾಣಿ ದಯಾಸಂಘ ಇವರು ರೂಪಾನಗರದಲ್ಲಿ ಕೊಳಚೆ ನಿವಾಸಿಗಳಿಗೆ ತಾತ್ಕಾಲಿಕವಾಗಿ ನೀಡಲಾಗಿರುವ ಅವರ ಜಾಗವನ್ನು ಖಾಲಿ ಮಾಡಿಸಿಕೊಡುವಂತೆ ಕೋರಿದರು. ಅಧೀಕ್ಷಕ ಇಂಜಿನಿಯರ್ ಜೆಎನ್‌ನರ್ಮ್ ಇವರು ಇದನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವಂತೆ ಸೂಚಿಸಲಾಯಿತು.<br><br>ಕೊಳಚೆ ನಿರ್ಮೂಲನಾ ಮಂಡಳಿಯಿಂದ ಸ್ವೀಕರಿಸಿರುವ 200 ತಕರಾರು ಅರ್ಜಿಗಳ ಸಾರ್ವಜನಿಕ ವಿಚಾರಣೆಯನ್ನು ನಡೆಸುವಂತೆ ಕಾರ್ಯಪಾಲಕ ಇಂಜಿನಿಯರ್, ಕೆಎಸ್‌ಸಿಬಿ ಇವರಿಗೆ ಸೂಚಿಸಿರುವುದಾಗಿ ಆಯುಕ್ತರು, ತಿಳಿಸಿದರು. | |
| 7. | **1.**ಮೈಸೂರು-ಬೆಂಗಳೂರು ರಸ್ತೆಯಿಂದ ಮೈಸೂರು-ನಂಜನಗೂಡುವರೆಗೆ 2 ಪಥದ ಹೊರ ವರ್ತುಲದ ರಸ್ತೆಯನ್ನು ಸರ್ವೀಸ್ ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು (0+0.25 ಕಿ.ಮಿ ಪಶ್ಚಿಮದ ಕಡೆಗೆ) 2. ಮೈಸೂರು-ಬೆಂಗಳೂರು ಹೊರ ವರ್ತುಲ ರಸ್ತೆಯಿಂದ-ಮೈಸೂರು ಬನ್ನೂರು ರಸ್ತೆವರೆಗೆ 4 ಪಥದ ರಸ್ತೆಯನ್ನು ಸರ್ವೀಸ್ | ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆಗಳು ಪ್ರಗತಿಯಲ್ಲಿರುವುದಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಇವರು ತಿಳಿಸಿದರು. ಟೆಂಡರಿನ ಆರ್ಥಿಕ ಬಿಡ್ಡನ್ನು ದಿನಾಂಕ: 20.01.2010 ರಂದು ತೆರೆಯಲಾಗುತ್ತಿದ್ದು, ಇದನ್ನು ಪರಿಶೀಲಿಸಿದ ನಂತರ 2-3 ದಿನಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸುವುದಾಗಿ ತಿಳಿಸಿದರು.<br>ಮುಂದುವರೆದು, ಸದರಿ ಕಾಮಗಾರಿಯನ್ನು ಫೆಬ್ರವರಿಯಲ್ಲಿ ಪ್ರಾರಂಭಗೊಳಿಸಿ 2010 ರ ಅಂತ್ಯದೊಳಗೆ ಪೂರ್ಣಗೊಳಿಸುವುದಾಗಿ ತಿಳಿಸಿದರು. | ಸದರಿ ಕಾಮಗಾರಿಗಳ ಟೆಂಡರ್‌ನ್ನು ದಿನಾಂಕ 04.02.2010 ರಂದು ಸರ್ಕಾರ ಸಲ್ಲಿಸಲಾಗಿದ್ದು, ಅನುಮೋದನೆಯನ್ನು ನಿರೀಕ್ಷಿಸಲಾಗಿದೆಯೆಂದು ಆಯುಕ್ತರು ಮೂಡಾ ತಿಳಿಸಿದರು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು (0 ಯಿಂದ 7.49ಕಿ.ಮಿ ಪೂರ್ವದ ಕಡೆಗೆ)<br>ಅಂದಾಜು ವೆಚ್ಚ: ರೂ. 219.03 ಕೋಟಿಗಳು. ಅನುಮೋದಿಸಿದ ದಿ:15.02.08 | | | |
| 8. | ದೊಡ್ಡ ಮಳೆನೀರು ಚರಂಡಿ ಪುನರ್ ನಿರ್ಮಾಣ<br>ಅಂದಾಜು ಮೊತ್ತ: ರೂ 384.60 ಕೋಟಿಗಳು (ಸದ್ಯಕ್ಕೆ ರೂ 125.00 ಕೋಟಿಗೆ ಮಿತಿಗೊಳಿಸಲಾಗಿದೆ)<br>ಮುಕ್ತಾಯವಾಗಬೇಕಾದುದು<br>ಡಿಸೆಂಬರ್ 2011. | 2010, 15 ಜನವರಿ ತಿಂಗಳ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 18.25 ಕೋಟಿಗಳ ಎದುರಾಗಿ ರೂ. 18.49 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಅಧೀಕ್ಷಕ ಇಂಜಿನಿಯರ್, ನರ್ಮ್, ಮೈನಪಾ ಇವರು ತಿಳಿಸಿದರು. | ಫೆಬ್ರವರಿ 15 2010ರ ಅಂತ್ಯಕ್ಕ ನಿಗಧಿತ ಗುರಿಯಾದ ರೂ. 20.05 ಕೋಟಿ ಎದುರಾಗಿ ರೂ. 20.45 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಿರುವುದಾಗಿ ಅಧೀಕ್ಷಕ ಇಂಜಿನಿಯರ್, ಜೆಎನ್‌ನರ್ಮ್ ಇವರು ತಿಳಿಸಿದರು. | |
| 9. | ಘನತ್ಯಾಜ್ಯ ವಸ್ತು ನಿರ್ವಹಣೆ: ಮೈಸೂರು ನಗರದಲ್ಲಿ ಸಮಗ್ರ ಮುನ್ಸಿಪಲ್ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ಲಾಂಟ್ ಅಭಿವೃದ್ಧಿ ಪಡಿಸುವುದು.<br>**ಅನುಮೋದಿತ ದಿ: 19-12-2008**<br>ಯೋಜನೆಯ ಮೊತ್ತ ರೂ. 29.98 ಕೋಟಿ<br>ಮುಕ್ತಾಯವಾಗಬೇಕಾದುದು ಜೂನ್ 2010. | 2010, 15 ಜನವರಿ ತಿಂಗಳ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 4.73 ಕೋಟಿಗಳ ಎದುರಾಗಿ ರೂ. 5.18 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಅಧೀಕ್ಷಕ ಇಂಜಿನಿಯರ್, ನರ್ಮ್, ಮೈನಪಾ ಇವರು ತಿಳಿಸಿದರು.<br>ಭೂಮಿ ತುಂಬುವ ಕಾಮಗಾರಿಯ ಟೆಂಡರನ್ನು ಸರ್ಕಾರವು ತಿರಸ್ಕರಿಸಿದ್ದು, ಇದಕ್ಕೆ ಮರು ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆ ಹಂತದಲ್ಲಿ ಈ ಕಾಮಗಾರಿಗೆ ನಿಗಧಿಪಡಿಸಿದ್ದ ಟೆಂಡರ್ ದಿನಾಂಕವನ್ನು ಮುಂದೂಡುವಂತೆ ಬಿಡ್‌ದಾರರು ಕೋರಿದ್ದರ ಮೇರೆಗೆ ಸದರಿ ದಿನಾಂಕವನ್ನು ಹಿಂದೆ ನಿಗಧಿಪಡಿಸಿದ್ದ ದಿನಾಂಕ: 18.01.2010 ರ ಬದಲಾಗಿ ದಿನಾಂಕ: 27.01.2010ಕ್ಕೆ ನಿಗಧಿಪಡಿಸಿದೆ.<br>ಸಲಕರಣೆಗಳು ಮತ್ತು ಯಂತ್ರೋಪಕರಣಗಳ ಖರೀದಿಗೆ ಸಂಬಂಧಿಸಿದಂತೆ, ಇದುವರೆಗೆ 166 ಆಟೋ ಟಿಪ್ಪರ್‌ಗಳು, 5 ಡಂಪರ್ ಪ್ಲೇಸರ್ಸ್‌ಗಳು, 2 ಕಾಂಪ್ಯಾಕ್ಟರ್‌ಗಳು, 30 ಶೇಖರಣಾ ತೊಟ್ಟಿಗಳು (4.5 cum) ಮತ್ತು 30 ಸ್ಕಿಪ್ ಕಂಟೇನರ್ಸ್‌ಳನ್ನು (4.5 cum) ಖರೀದಿಸಲಾಗಿದೆ.<br>ಹಾಲಿ ಇರುವ ಕಾಂಪೋಸ್ಟ್ ಸುತ್ತಲು ಬ್ಯಾರಿಕೇಡಿಂಗ್ ನಿರ್ಮಾಣಕ್ಕೆ ದಿನಾಂಕ: 21.01.2010 ರಂದು ಭೂಮಿ ಪೂಜೆ ನಿಗಧಿಪಡಿಸಿದೆ. | 15 ಫೆಬ್ರವರಿ 2010, ತಿಂಗಳ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 5.08 ಕೋಟಿಗಳ ಎದುರಾಗಿ ರೂ. 5.18 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಅಧೀಕ್ಷಕ ಇಂಜಿನಿಯರ್, ನರ್ಮ್, ಮೈನಪಾ ಇವರು ತಿಳಿಸಿದರು.<br>ಶ್ರೀ ಕುಮಾರ್, ನಾಗರೀಕ ಸಮಿತಿ ಇವರು ಮೂಲದಲ್ಲಿ ಕಸವನ್ನು ಬೇರ್ಪಡಿಸಲು, ಕಸದ ಬುಟ್ಟಿಗಳನ್ನು ನೀಡುವ ಬಗ್ಗೆ ಪ್ರಸ್ತಾಪಿಸಿದರು. ಇದಕ್ಕೆ ಉತ್ತರವಾಗಿ ಆಯುಕ್ತರು, ಮೈನಪಾ ಇವರು ಪರಿಷ್ಕೃತ ಯೋಜನಾ ವರದಿಗೆ ಸರ್ಕಾರದಿಂದ ಅನುಮೋದನೆಯನ್ನು ನೀರಿಕ್ಷಿಸಲಾಗಿದೆ ಎಂದು ತಿಳಿಸಿದರು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ಘನತಾಜ್ಯ ವಸ್ತು ಸಾಗಣೆ ವಾಹನಕ್ಕೆ ಜಿ.ಪಿ.ಎಸ್ ಟ್ರ್ಯಾಕಿಂಗ್ ಘಟಕದ ಸ್ಥಾಪನೆಯನ್ನು ದಿನಾಂಕ: 25.01.2010 ರಂದು ಪ್ರಾರಂಭಿಸಿ ಫೆಬ್ರವರಿ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು. | | |
| 10. | ಮೈಸೂರು ನಗರದ ಪಾರಂಪರಿಕ ಕಟ್ಟಡಗಳು ಹಾಗೂ ವೃತ್ತಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು.<br>ಯೋಜನೆಯ ಮೊತ್ತ ರೂ. 39.45 ಕೋಟಿ | ಚರ್ಚೆಯಾಗಿರುವುದಿಲ್ಲ. | ಚರ್ಚೆಯಾಗಿರುವುದಿಲ್ಲ. | |
| 11. | ಇ.ಡಬ್ಲ್ಯೂ.ಎಸ್. ಮನೆಗಳು ಮತ್ತು ಮೂಲಭೂತ ಅಭಿವೃದ್ಧಿ ಪ್ರಾಧಿಕಾರ ಲಿಮೆಟೆಡ್. ಬಿ.ಎಸ್.ಯು.ಪಿ. ಅಡಿಯಲ್ಲಿ ಯೋಜನೆಯ ಮೊತ್ತ ರೂ. 52.35 ಕೋಟಿ ಮುಕ್ತಾಯವಾಗಬೇಕಾದ ದಿನಾಂಕ: | ಚರ್ಚೆಯಾಗಿರುವುದಿಲ್ಲ. | ಚರ್ಚೆಯಾಗಿರುವುದಿಲ್ಲ. | |

**<u>ಸಾಮಾನ್ಯ ಚರ್ಚೆ:</u>**

- ಜಸ್ಕೋ ವಿಷಯದ ಬಗ್ಗೆ ಚರ್ಚಿಸುವ ಸಲುವಾಗಿ ದಿನಾಂಕ 23.02.2010 ರಂದು ಮಧ್ಯಹ್ನ 12.00 ಗಂಟೆಗೆ ಒಂದು ಪ್ರತ್ಯೇಕ ಸಭೆಯನ್ನು ಏರ್ಪಡಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಾಧಿಕಾರಿಗಳು ಸೂಚಿಸಿದರು. ವ್ಯವಸ್ಥಾಪಕ ನಿರ್ದೇಶಕರು ಜಸ್ಕೋ, ವ್ಯವಸ್ಥಾಪಕ ನಿರ್ದೇಶಕರು ಕೆ.ಯು.ಡಬ್ಲ್ಯೂಎಸ್ & ಡಿಬಿ, ವ್ಯವಸ್ಥಾಪಕ ನಿರ್ದೇಶಕರು ಚೆಸ್ಕಾಂ, ಇವರನ್ನು ಮತ್ತು ಪಾಲಿಕೆಯ ಎಲ್ಲಾ ಸದಸ್ಯರುಗಳನ್ನು ಸಂಬಂಧಿಸಿದ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಲು ಸೂಚಿಸಲಾಯಿತು. ಇದು ಸಾರ್ವಜನಿಕ ಸಭೆ ಆಗಿರುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಲಾಯಿತು (ಕ್ರಮ ಅಧೀಕ್ಷಕ ಇಂಜಿನಿಯರ್ ಜೆಎನ್‌ನರ್ಮ್).
- ಶ್ರೀ ನವೀನ್, ಸದಸ್ಯರು ಕರ್ನಾಟಕ ರಕ್ಷಣಾ ವೇದಿಕೆ ಇವರು ಕಳೆದ 6 ತಿಂಗಳಿಂದ ವಲಯವಾರು ನಾಗರೀಕ ಸಮಿತಿ ಸಭೆಯನ್ನು ನಡೆಸಿಲ್ಲವೆಂದು ತಿಳಿಸಿದರು. ಇದಕ್ಕೆ ಉತ್ತರವಾಗಿ ಆಯುಕ್ತರು, ಮೈನಪಾ ಇವರು ಕೆಲವು ವಲಯಗಳಲ್ಲಿ ನಾಗರೀಕ ಸಮಿತಿ ಸಭೆಯನ್ನು ನಡೆಸಿರುವುದಾಗಿ ತಿಳಿಸಿದರು. ಸಭೆಗಳನ್ನು ನಡೆಸಿರುವ ವಿವರಗಳನ್ನು ನೀಡುವಂತೆ ಹಾಗೂ ಅವುಗಳನ್ನು ಕಾರ್ಯಕ್ರಮ ಪಟ್ಟಿಯಲ್ಲಿ ಪ್ರದರ್ಶಿಸುವಂತೆ ಮಾನವ ಸಂಪನ್ಮೂಲ ಅಧಿಕಾರಿ, ಪಿಐಯು ಜೆಎನ್‌ನರ್ಮ್, ಇವರಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಮತ್ತು ನರ್ಮ್ ವಿಶೇಷಾಧಿಕಾರಿಗಳು ಸೂಚಿಸಿದರು (ಕ್ರಮ ಅಧೀಕ್ಷಕ ಇಂಜಿನಿಯರ್ ಜೆಎನ್‌ನರ್ಮ್).

ಸಭೆಯಲ್ಲಿ ಹಾಜರಿದ್ದ, ಎಲ್ಲರಿಗೂ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಜಿಲ್ಲಾಧಿಕಾರಿಗಳು ಹಾಗು ವಿಶೇಷಾಧಿಕಾರಿಗಳು,**
**ಜವಹರಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆ,**
**ಮೈಸೂರು.**

**ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ :**

1. ಮಾನ್ಯ ಮುಖ್ಯ ಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಹಾಗೂ ವಿದಾನಸಭೆಯ ಸದಸ್ಯರು, ಕೃಷ್ಣರಾಜ ಕ್ಷೇತ್ರ, ಮೈಸೂರು.
2. ಮಾನ್ಯ ಲೋಕಸಭಾ ಸದಸ್ಯರು, ಮೈಸೂರು ಕ್ಷೇತ್ರ, ಮೈಸೂರು.
3. ಮಾನ್ಯ ವಿಧಾನಸಭಾ ಸದಸ್ಯರು, ಚಾಮರಾಜ ಕ್ಷೇತ್ರ, ಮೈಸೂರು.
4. ಮಾನ್ಯ ವಿಧಾನಸಭಾ ಸದಸ್ಯರು, ನರಸಿಂಹರಾಜ ಕ್ಷೇತ್ರ, ಮೈಸೂರು.
5. ಮಾನ್ಯ, ವಿಧಾನಸಭಾ ಸದಸ್ಯರು, ಚಾಮುಂಡೇಶ್ವರಿ ಕ್ಷೇತ್ರ, ಮೈಸೂರು.
6. ಶ್ರೀ ಡಿ. ಪದ್ಮನಾಭ, ಅಧ್ಯಕ್ಷರು, ಛೇರ್‌ಮೆನ್, ಜಿಲ್ಲಾ ಪ್ಲಾನಿಂಗ್ ಕಮಿಟಿ, ಮೈಸೂರು.
7. ಶ್ರೀ ಹೆಚ್.ಎನ್.ಶ್ರೀಕಂಠಯ್ಯ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ನಗರಪಾಲಿಕೆ ಸದಸ್ಯರು, ಮೈಸೂರು.
8. ಶ್ರೀ ಬಿ.ಎಲ್.ಭೈರಪ್ಪ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ನಗರಪಾಲಿಕೆ ಸದಸ್ಯರು, ಮೈಸೂರು.
9. ಶ್ರೀ ಎಂ.ಜಯಶಂಕರಸ್ವಾಮಿ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ಮೈಸೂರು.
10. ಮಾನ್ಯ ಮಹಾಪೌರರು, ಮೈಸೂರು ನಗರಪಾಲಿಕೆ, ಮೈಸೂರು.
11. ಮಾನ್ಯ ಉಪ ಮಹಾ ಪೌರರು, ಮೈಸೂರು ನಗರಪಾಲಿಕೆ, ಮೈಸೂರು.
12. ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ 4ನೇ ಮಹಡಿ, ವಿಕಾಸಸೌಧ, ಬೆಂಗಳೂರು.
13. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.
14. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.
15. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ. ಸಿಲ್ವರ್ ಜ್ಯುಬಲಿ ಬ್ಲಾಕ್, 2ನೇ ಮಹಡಿ, Unity ಕಟ್ಟಡ, 3ನೇ ಅಡ್ಡರಸ್ತೆ, ಮಿಷನ್ ರಸ್ತೆ, ಬೆಂಗಳೂರು.
16. ವ್ಯವಸ್ಥಾಪಕ ನಿರ್ದೇಶಕರು, ಕೆ,ಯು,ಡಬ್ಲ್ಯೂ.ಎಸ್, ಮತ್ತು ಡಿ.ಬಿ., ನಂ. 6, ಜಲಭವನ, 1ನೇ ಹಂತ, 1ನೇ ಸ್ಟೇಜ್, ಬಿ.ಟಿ.ಎಂ. ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು 560029.
17. ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ನಿ., ಕೆಂಗಲ್ ಹನುಮಂತಯ್ಯ ಜೋಡಿ ರಸ್ತೆ, ಶಾಂತಿನಗರ, ಬೆಂಗಳೂರು.
18. ಆಯುಕ್ತರು, ಪಾರಾಂಪರಿಕ ಇಲಾಖೆ, ಅರ್ಕ್ಯಾಲಜಿ ಮ್ಯೂಸಿಯಂ ಮತ್ತು ಪಾರಂಪರಿಕ, ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರ್ಬಾ ರಸ್ತೆ, ಬೆಂಗಳೂರು.19.
19. ಆಯುಕ್ತರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ,ಬೆಂಗಳೂರು – 1.

**II. <u>ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.</u>**

1. ಆಯುಕ್ತರು, ಮೈಸೂರು ನಗರಪಾಲಿಕೆ, ಮೈಸೂರು.
2. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
3. ಆಯುಕ್ತರು, ಕೊಳಚೆ ನಿರ್ಮೂಲನ ಮಂಡಳಿ, ಶೇಷಾದ್ರಿಪುರಂ, ಬೆಂಗಳೂರು.
4. ಯೋಜನಾ ನಿರ್ದೇಶಕರು, ಡಿಯುಡಿಸಿ, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು.
5. ಉಪ ವಿಭಾಗಾಧಿಕಾರಿಗಳು, ಮೈಸೂರು.
6. ಅಧೀಕ್ಷಕ ಇಂಜಿನಿಯರ್, ಮೈಸೂರು ನಗರಪಾಲಿಕೆ, ಮೈಸೂರು.
7. ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿ., ಮೈಸೂರು.
8. ಕಾರ್ಯಪಾಲಕ ಇಂಜಿನಿಯರ್, ಕೆ,ಯು,ಡಬ್ಲ್ಯೂ.ಎಸ್, ಮತ್ತು ಡಿ.ಬಿ., ನಗರವಿಭಾಗ (ಜೆಎನ್ ನರ್ಮ್) ಯಾದವಗಿರಿ, ಮೈಸೂರು.
9. ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಮೈಸೂರು.
10. ಕಾರ್ಯಪಾಲಕ ಇಂಜಿನಿಯರ್, ಕ.ರಾ.ರ.ಸಾ.ನಿ.,, ಮೈಸೂರು ಗ್ರಾಮಾಂತರ ವಿಭಾಗ, ಬನ್ನಿಮಂಟಪ, ಮೈಸೂರು.
11. ಉಪ ನಿರ್ದೇಶಕರು, ಪಾರಂಪರಿಕ ಇಲಾಖೆ, ಮೈಸೂರು.
12. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು.

**ಜಿಲ್ಲಾಧಿಕಾರಿಗಳು ಹಾಗು ವಿಶೇಷಾಧಿಕಾರಿಗಳು,**
**ಜವಹರಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆ,**
**ಮೈಸೂರು.**